<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 89/2014 ಸಿಡಬ್ಲ್ಯೂ: 5 ಪಿಡಬ್ಲ್ಯೂ: 4

ಪ್ರಮಾಣವಚನ ಬೋಧಿಸಲಾಯಿತು ದಿಃ 05-12-2025

ಹೆಸರು : ಮಹೇಶ್

ತಂದೆ ಹೆಸರು : ರಾಮಲಿಂಗಪ್ಪ ಪೂಜಾರಿ

ವಯಸ್ಸು : 30 ವರ್ಷ

ಉದ್ಯೋಗ : ಪೋಲೀಸ್ ಪೇದೆ, ಎಲೆಕ್ಟ್ರಾನಿಕ್ ಸಿಟಿ ಬೆಂಗಳೂರು.

ವಾಸಸ್ಥಳ : ಬೆಂಗಳೂರು

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ನನ್ನ ತಂದೆ . ಚಾ ಸಾ 7 ನನ್ನ ತಾಯಿ. ಚಾ ಸಾ 4 ಮತ್ತು 6 ನನ್ನ ಅಣ್ಣಂದಿರು. ಚಾ ಸಾ 8 ರಿಂದ 10 ನಮ್ಮ ಊರಿನವರು. ಆರೋಪಿತರು ಪರಿಚಯ. ದಿ.23-03-2013 ರಂದು ಬೆಳಗಿನ ಜಾವ ಸುಮಾರು 06-00 ಗಂಟೆಗೆ ನಾನು ಮತ್ತು ಚಾ ಸಾ 1, 6 ಮತ್ತು 7 ರವರ ಮನೆಯಲ್ಲಿದ್ದಾಗ ನಮ್ಮ ಅಣ್ಣನಾದ ಚಾ ಸಾ 4 ರವರು ಹಾಲು ಕಮಿಟಿಯಿಂದ ನಮ್ಮ ಮನೆಯ ಕಡೆಗೆ 1 ನೇ ಆರೋಪಿತರ ಮನೆಯ ಮುಂದೆ ಇರುವ ರಸ್ತೆಯ ಮೇಲೆ ನಡೆದುಕೊಂಡು ಬರುತ್ತಿರುವಾಗ 1 ನೇ ಆರೋಪಿತನು ಚಾ ಸಾ 4 ರವರಿಗೆ ತಡೆದು ನಿಲ್ಲಿಸಿ ಹೇ ಬೊಸಡಿ ಮಗನೆ ನೀನು ಹೊಲದ ಬಂದಾರಿ ಸಂಬಂದ ಬಹಳ ನಿಗಿರಾಡಿದ್ದೀ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು. ಆಗ ನಮ್ಮ ಅಣ್ಣನಾದ ಚಾ ಸಾ 4 ರವರು ನೀವೆ ನಮ್ಮ ಹೋಲದ ಬಂದಾರಿ ಹೊಡೆದು ನಮಗೆ ತಕರಾರು ಮಾಡುತ್ತೀರಾ ಅಂತಾ ಕೇಳಿದನು. ಆಗ 1 ನೇ ಆರೋಪಿತನು ಏಕಾ ಏಕಿ ಒಂದು ಚೂಪಾದ ಕಟ್ಟಿಗೆಯಿಂದ ಚಾ ಸಾ 4 ರವರ ತಲೆಯ ಬಲಭಾಗಕ್ಕೆ ಹೋಡೆದಿರುತ್ತಾರೆ. ಚಾ ಸಾ 4 ರವರು ಚೀರಾಡುತ್ತಿರುವಾಗ ನಾನು ಅಲ್ಲಿಗೆ ಹೋಗಿ ನೋಡಲಾಗಿ ಚಾ ಸಾ 4 ರವರಿಗೆ ಏಕೆ ಹೊಡೆಯುತ್ತಿದ್ದೀರಾ ಅಂತಾ ಕೇಳಿದಾಗ ಆಗ 1 ನೇ ಆರೋಪಿತನು ಶಿವಕಾಂತಮ್ಮ ಊರ ಸೂಳೆಗೆ ಹುಟ್ಟಿದ್ದೀರಾ ಅಂತಾ ಬೈದನು. ಆಗ 1 ರಿಂದ 7 ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಅದರಲ್ಲಿ 1 ನೇ ಆರೋಪಿತನು ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ನನ್ನ ತಲೆಗೆ ಹೋಡೆದು ಗಾಯ ಪಡಿಸಿದನು. ಆಗ ಅಲ್ಲೆ ಇದ್ದ 6 ಆರೋಪಿತಳು ನನ್ನ ಎಡಗೈಗೆ ಹಲ್ಲಿನಿಂದ ಕಚ್ಚಿದಳು ಹಾಗೂ ಕೈಯಿಂದ ಬೆನ್ನಿಗೆ ಹೊಡೆದು ಗುಪ್ತಗಾಯ ಪಡಿಸಿದಳು. ಆಗ ಚಾ ಸಾ 6 ರವರ ಜಗಳ ನೋಡಿ ಬಿಡಿಸಲು ಹೋಡಿ ಬಂದಾಗ 1 ನೇ ಆರೋಪಿತನು ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ಆತನ ತಲಗೆ ಜೋರಾಗಿ ಹೊಡೆದು ರಕ್ತಗಾಯ ಪಡಿಸಿದನು. ಅದೇ ರೀತಿ 2 ನೇ ಆರೋಪಿತನು ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ

ನನ್ನ ಅಣ್ಣನಾದ ಚಾ ಸಾ 6 ರವರ ಬೆನ್ನಿಗೆ ಮತ್ತು ಕಾಲಿಗೆ ಹೋಡೆದು ಗುಪ್ತಗಾಯ ಪಡಿಸಿದನು. ಅಷ್ಟರಲ್ಲಿ ಚಾ ಸಾ 1 ಮತ್ತು 7 ರವರು ಬಂದರು. ಆಗ 1 ನೇ ಆರೋಪಿತನು ಚಾ ಸಾ 1 ರವರಿಗೆ ಬೆನ್ನಿಗೆ ಮತ್ತು ಬಲಕಗಾಿಗೆ ಕಟ್ಟಿಗೆಯಿಂದ ಹೋಡೆದು ಗುಪ್ತಗಾಯ ಪಡಿಸಿದನು. ಆಗ ಅಲ್ಲೆಇದ್ದ 4ನೇ ಆರೋಪಿತಳು ನನ್ನ ತಾಯಿಯಾದ ಚಾ ಸಾ 7ರವರಿಗೆ ಕೈಯಿಂದ ಹೋಡೆದು ಗಾಯ ಪಡಿಸಿದಳು ಮತ್ತು ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಟೊಂಕಕ್ಕೆ ಹೊಡೆದು ಗುಪ್ತಗಾಯ ಪಡಿಸಿದಳು. 5 ನೇ ಆರೋಪಿತಳು ಚಾ ಸಾ 7 ರವರಿಗೆ ಎಟಡೂ ಭುಜಕ್ಕೆ ಹೋಡೆದು ಗುಪ್ತಗಾಯ ಪಡಿಸಿದಳು. ಆಗ 6 ಮತ್ತು 7 ನೇ ಆರೋಪಿತಳು ಚಾ ಸಾ 7ರ ವರಿಗೆ ಹೊಡೆ ಬಡೆ ಮಾಡಿರುತ್ತಾರೆ. ಆಗ 2 ನೇ ಆರೋಪಿತನು ನನ್ನತಾಯಿಯ ಸೀರೆ ಹಿಡಿದು ಎಳೆದಾಡಿ ಮಾನ ಭಂಗಮಾಡಲು ಪ್ರಯತ್ನಿಸಿದ್ದರು. ಆಗ ಅಲ್ಲೆ ಇದ್ದ 3ನೇ ಆರೋಪಿತನು ಬಿಡಬೇಡರಿ ಈರಂಡಿ ಮಕ್ಕಳಿಗೆ ಹೊಡೆಯಿರಿ ಅಂತಾ ಪರಚೋದನೆ ನೀಡಿದ್ದು. ಆಗ ಚಾ ಸಾ 8ರಿಂದ 10ರವರ ಬಂದು ಜಗಳ ಬಿಡಿಸಿದರು. ಆಗ ಜಗಳ ಬಿಟ್ಟು ಹೋಗುವಾಗ1 ನೇ ಆರೋಪಿತನು ಬೋಸಡಿ ಮಕ್ಕಳೆ ಇವತ್ತುಉಳಿದುಕೊಂಡರಿ ಇನ್ನೊಮ್ಮೆ ನಮ್ಮತಂಟೆಗೆ ಬಂದರೆ ಕಡಿದು ಕೊಂದು ಹಾಕುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ಅಲ್ಲಿಂದ ಸೇಡಂ ಸರ್ಕಾರಿ ಆಸ್ಪತ್ರೆಗೆ ಬಂದಿದ್ದೆವು. ಆಗ ಇಲ್ಲಿನ ವೈದ್ಯರು ಆಗಲ್ಲ ಎಂದು ಹೇಳಿದಾಗ ಕಲಬುರಗಿಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ಆಗ ಅಲ್ಲಿಂದ ಅಲ್ಲೆ ಇರುವ ಬಸವೇಶ್ವರ ಆಸ್ಪತ್ರೆಗೆ ಹೋಗಿದ್ದೆವು. ನಂತರ ಅಲ್ಲಿನ ವೈದ್ಯರು ಹೆಚ್ಚಿನ ಚಿಕಿತ್ಸೆಗಾರಿ ಸೊಲ್ಲಾಪುರ ದಲ್ಲಿರುವ ಅಶ್ವಿನಿ ಆಸ್ಪತ್ರೆಗ ಕಳುಹಿಸಿಕೊಟ್ಟಿದ್ದರು. ಸಾಕ್ಷಿಗೆ ಎರಡು ಕಟ್ಟಿಗೆಗಳನ್ನು ತೋರಿಸಲಾಗಿ ಸಾಕ್ಷಿಯು ಇದೇ ಕಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದು ಹೇಳುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ -1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಆದರೆ ಯಾವುದೇ ಸಮಂಜಸ ಕಾರಣ ನೀಡದೇ ಇರುವುದರಿಂದ ವಿನಂತಿಯನ್ನು ತಳ್ಳಿಹಾಕಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 89/2014 ಸಿಡಬ್ಲೂ: 7 ಪಿಡಬ್ಲೂ: 5

ಪ್ರಮಾಣವಚನ ಬೋಧಿಸಲಾಯಿತು ದಿಃ 05-12-2025

ಹೆಸರು : ಶಿವಕಾಂತಮ್ಮ

ಗಂಡ ಹೆಸರು : ರಾಮಲಿಂಗಪ್ಪ

ವಯಸ್ಸು : 50 ವರ್ಷ

ಉದ್ಯೋಗ : ಅಂಗನವಾಡಿ ಶಿಕ್ಷಕಿ

ವಾಸಸ್ಥಳ : ನಾಮವಾರ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ನನ್ನ ಗಂಡ. ಚಾ ಸಾ 4 ರಿಂದ 6 ನನ್ನ ಮಕ್ಕಳು. ಚಾ ಸಾ 8 ರಿಂದ 10 ನಮ್ಮ ಊರಿನವರು. ಆರೋಪಿತರು ಪರಿಚಯ.

ದಿ.23-03-2023 ರಂದು ಬೆಳಗಿನ ಜಾವ ಸುಮಾರು 06-00 ಗಂಟೆಗೆ ನಾನು ಮತ್ತು ಚಾ ಸಾ 1,5 ಮತ್ತು 6 ರವರು ಮನೆಯಲ್ಲಿದ್ದಾಗ ನಮ್ಮ ಮಗನಾದ ಚಾ ಸಾ 4 ರವರು ಹಾಲು ಕಮಿಟಿಯಿಂದ ನಮ್ಮ ಮನೆಯ ಕಡೆಗೆ 1 ನೇ ಆರೋಪಿತರ ಮನೆಯ ಮುಂದೆ ಇರುವ ರಸ್ತೆಯ ಮೇಲೆ ನಡೆದುಕೊಂಡು ಬರುತ್ತಿರುವಾಗ 1 ನೇ ಆರೋಪಿತನು ಚಾ ಸಾ 4 ರವರಿಗೆ ತಡೆದು ನಿಲ್ಲಿಸಿ ಹೇ ಬೊಸಡಿ ಮಗನೆ ನೀನು ಹೊಲದ ಬಂದಾರಿ ಸಂಬಂದ ಬಹಳ ನಿಗಿರಾಡಿದ್ದೀ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದು. ಆಗ ನನ್ನ ಮಗನಾದ ಚಾ ಸಾ 4 ರವರು ನೀವೆ ನಮ್ಮ ಹೋಲದ ಬಂದಾರಿ ಹೊಡೆದು ನಮಗೆ ತಕರಾರು ಮಾಡುತ್ತೀರಾ ಅಂತಾ ಕೇಳಿದನು. ಆಗ 1 ನೇ ಆರೋಪಿತನು ಏನೂ ಪಂಚಾಯಿತಿ ಮಾಡುತ್ತೀರೀ ಸುಳೆ ಮಕ್ಕಳೆ ಅಂತಾ ಕಟ್ಟಿಗೆಯಿಂದ ಚಾ ಸಾ 4 ರವರ ತಲೆಯ ಬಲಭಾಗಕ್ಕೆ ಹೋಡೆದಿರುತ್ತಾರೆ. ಚಾ ಸಾ 4 ರವರು ಚೀರಾಡುತ್ತಿರುವಾಗ ನನ್ನ ಮಗನಾದ ಚಾ ಸಾ 5 ರವರು ಅಲ್ಲಿಗೆ ಹೋಗಿ ನೋಡಲಾಗಿ ಚಾ ಸಾ 4 ರವರಿಗೆ ಏಕೆ ಹೊಡೆಯುತ್ತಿದ್ದೀರಾ ಅಂತಾ ಕೇಳಿದಾಗ ಆಗ 1 ರಿಂದ 7 ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಚಾ ಸಾ 5 ರವರಿಗೆ ಹೋಡೆದಿರುತ್ತಾರೆ .ಆ ಶ ಬ್ದ ಕೇಳಿ ಇನ್ನ ಇನೊಬ್ಬ ಮಗ ಚಾಸಾ 6 ರವರು ಹೊಡಿ ಹೊಗಿರುತ್ತಾನೆ. ಆಗ ಚಾ ಸಾ 6 ರವರ ಜಗಳ ನೋಡಿ ಬಿಡಿಸಲು ಹೋಡಿ ಹೋದಾಗ 1 ನೇ ಆರೋಪಿತನು ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ಆತನ ತಲಗೆ ಜೋರಾಗಿ ಹೊಡೆದು ರಕ್ತಗಾಯ ಪಡಿಸಿದನು. ಅದೇ ರೀತಿ 2 ನೇ ಆರೋಪಿತನು ತನ್ನ ಕೈಯಲ್ಲಿದ್ದ ಕಟ್ಟಿಗೆಯಿಂದ ನನ್ನ ಮಗನಾದ ಚಾ ಸಾ 6 ರವರ ಬೆನ್ನಿಗೆ ಮತ್ತು ಕಾಲಿಗೆ ಹೋಡೆದು ಗುಪ್ತಗಾಯ ಪಡಿಸಿದನು. ಆಗ 4ನೇ

ಆರೋಪಿತಳು ನನ್ನ ಮಗನಾದ ಚಾ ಸಾ 5 ರವರ ಕೈಂಗೆ ಕಚ್ಚಿದಳು. ಆಗ 4 ಮತ್ತು 5 ನೇ ಆರೋಪಿತಳು ಚಾ ಸಾ 5 ರವರಿಗೆ ಹೊಡೆದರು. ಆಗ 4 ರಿಂದ 6 ನೇ ಆರೋಪಿತಳು ಕೈಯಿಂದ ಚಾ ಸಾ 6 ರವರಿಗೆ ಹೊಡೆದಿರುತ್ತಾರೆ. ಆಗ ನಾನು ಮತ್ತು ಚಾ ಸಾ 1ರವ ರು ಅಲ್ಲಿಗೆ ಹೋದಾಗ ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ 1 ನೇ ಆರೋಪಿತನು ಕಟ್ಟಿಗೆಯಿಂದ ಬೆನ್ನಿಗೆ ಮತ್ತು ಬಲಗಾಲಿನ ತೊಡೆಗೆ ಹೋಡೆದಿರುತ್ತಾನೆ. ಆಗ 4 ನೇ ಆರೋಪಿತಳು ಚಾ ಸಾ 1 ರವರಿಗೆ ಕಟ್ಟಿಗೆಯಿಂದ ಹೊಡೆದಿರುತ್ತಾಳೆ. ಆಗ 4 ನೇಆ ರೋಪಿತಳು ನನಗೂ ಸಹಎಡಗಾಲಿಗೆ ಕಟಿಟಗೆಯಿಂದ ಹೊಡೆದಿರುತ್ತಾರೆ. ಆಗ 5 ನೇ ಆರೋಪಿತಳು ನನ್ನ ಬಲ ಭುಜಕ್ಕೆ ಹೋಡೆದು ಗುಪ್ತಗಾಯ ಪಡಿಸಿದಳು. ಆಗ ತು 7 ನೇ ಆರೋಪಿತಳು ನನ್ನ ಬಲ ಭುಜಕ್ಕೆ ಹೋಡೆದು ಗುಪ್ತ ಗಾಯ ಪಡಿಸಿದಳು. ಆಗ 2 ನೇ ಆರೋಪಿತನು ನನ್ನ ಸೀರೆ ಹಿಡಿದು ಎಳೆದಾಡಿ ಮಾನ ಭಂಗಮಾಡಲು ಪ್ರಯತ್ನಿಸಿದ್ದರು. ಆಗ ಚಾ ಸಾ 4 ರವರು ನನ್ನ ಅಮ್ಮನಿಗೆ ಏಕೆ ಹೋಡೆದಯುತ್ತೀರಾ ಅಂತಾ ಕೇಳಿದಾಗ ಕೈಕಾಲು ಹಿಡಿದು ಎಳೆದಾಡಿ ಒಂದು ಕಡೆಗೆ ಬಿಸಾಡಿದರು. ಅಲ್ಲೆ ಇದ್ದ 3ನೇ ಆರೋಪಿತನು ಬಿಡಬೇಡರಿ ಈರಂಡಿ ಮಕ್ಕಳಿಗೆ ಹೊಡೆಯಿರಿ ಅಂತಾ ಪರಚೋದನೆ ನೀಡಿದ್ದು. ಆಗ ಚಾ ಸಾ 8ರಿಂದ 10ರವರ ಬಂದು ಜಗಳ ಬಿಡಿಸಿದರು. ನಂತರ ಅಲ್ಲಿಂದ ಸೇಡಂ ಸರ್ಕಾರಿ ಆಸ್ಪತ್ರೆಗೆ ಬಂದಿದ್ದೆವು. ಆಗ ಇಲ್ಲಿನ ವೈದ್ಯರು ಆಗಲ್ಲ ಎಂದು ಹೇಳಿದಾಗ ಕಲಬುರಗಿಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ಆಗ ಅಲ್ಲಿಂದ ಅಲ್ಲೆ ಇರುವ ಬಸವೇಶ್ವರ ಆಸ್ಪತ್ರೆಗೆ ಹೋಗಿದ್ದೆವು. ನಂತರ ಅಲ್ಲಿನ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಸೊಲ್ಲಾಪುರ ದಲ್ಲಿರುವ ಅಶ್ವಿನಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದರು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೆನು. ಸಾಕ್ಷಿಗೆ ಎರಡು ಕಟ್ಟಿಗೆಗಳನ್ನು ತೋರಿಸಲಾಗಿ ಸಾಕ್ಷಿಯು ಇದೇ ಕಟ್ಟಿಗೆಯಿಂದ ಹೊಡೆದಿರುತ್ತಾರೆ ಎಂದು ಹೇಳುತ್ತಾರೆ. ಅವುಗಳನ್ನು ಈಗಾಗಲೇ ಮು ಮಾ -1 ಮತ್ತು 2 ಎಂದು ಗುರುತಿಸಲಾಗಿದೆ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ:

ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಆದರೆ ಯಾವುದೇ ಸಮಂಜಸ ಕಾರಣ ನೀಡದೇ ಇರುವುದರಿಂದ ವಿನಂತಿಯನ್ನು ತಳ್ಳಿಹಾಕಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ . ದಂ. ಸೇಡಂ.**